# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 21 (261) |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಡಾ: ತಳವಾರ್ ಸಾಬಣ್ಣ<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ<br>ಮೂಲಸೌಲಭ್ಯ ಅಭಿವೃದ್ಧಿ ಸಚಿವರು |
| ಉತ್ತರಿಸುವ ದಿನಾಂಕ | : | 12.08.2025 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಮಳಖೇಡ ಗ್ರಾಮದ ಮೆ: ಅಲ್ಟ್ರಾಟೆಕ್ ಸಿಮೆಂಟ್ ಲಿಮಿಟೆಡ್ ಕಂಪನಿಯು ತನ್ನ ನಾಲ್ಕನೆಯ ಸಿಮೆಂಟ್ ಉತ್ಪಾದನಾ ಘಟಕಕ್ಕೆ ಹಂಗನಹಳ್ಳಿ, ಊಡಗಿ, ಹುಡಾ (ಬಿ) ಮತ್ತು ನೃಪತುಂಗ ನಗರ ಗ್ರಾಮಗಳ ರೈತರಿಂದ ಕೃಷಿ ಜಮೀನು ಖರೀದಿಸಿ ಯೋಗ್ಯ ಬೆಲೆ ನೀಡದೆ ವಂಚನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಆದೇಶ ಸಿಐ 30 ಎಸ್‌ಪಿಐ 2010, ದಿನಾಂಕ 25.02.2010 ರಲ್ಲಿ ಸೇಡಂ ತಾಲ್ಲೂಕು, ಕಲಬುರಗಿ ಜಿಲ್ಲೆಯಲ್ಲಿ ಮೆ\|\| ರಾಜಶ್ರೀ ಸಿಮೆಂಟ್ಸ್ ಲಿ, ಕಂಪನಿಗೆ ಸಿಮೆಂಟ್ ಘಟಕ ಸ್ಥಾಪನೆಗೆ ಅನುಮೋದನೆ ನೀಡಿದ್ದು, ಸದರಿ ಯೋಜನೆಗೆ 573.15 ಎಕರೆ ಜಮೀನು ಘಟಕ ಸ್ಥಾಪನೆಗೆ ಮತ್ತು 398.23 ಎಕರೆ ಜಮೀನು ಮೈನಿಂಗ್‌ಗಾಗಿ ಕೆ.ಎಲ್.ಆರ್ ಕಾಯ್ದೆಯಡಿ ಖರೀದಿಸಲು ಅನುಮೋದನೆ ನೀಡಲಾಗಿದೆ.<br><br>ಸರ್ಕಾರದ ಆದೇಶ ಸಂಖ್ಯೆ ಕಂಇ 76 ಎಲ್‌ಆರ್‌ಎಂ 2010, ದಿನಾಂಕ 27.11.2010 ರಲ್ಲಿ 572.24 ಎಕರೆ ಜಮೀನನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ ಕಂಇ 81 ಎಲ್‌ಆರ್‌ಎಂ 2010, ದಿನಾಂಕ 25.01.2011 ರಲ್ಲಿ 383.39 ಎಕರೆ ಜಮೀನನ್ನು ಕರ್ನಾಟಕ ಭೂ ಸುಧಾರಣಾ ಕಾಯ್ದೆ, 1961 ರ ಕಲಂ 109 ರಡಿ ಭೂಮಿ ಖರೀದಿಸಲು ಅನುಮತಿ ನೀಡಲಾಗಿದೆ.<br><br>ಕಂದಾಯ ಇಲಾಖೆಯು ತನ್ನ ಅನಧಿಕೃತ ಟಿಪ್ಪಣಿ ದಿನಾಂಕ 06.08.2025 ರಲ್ಲಿ ಈ ಕೆಳಕಂಡಂತೆ ತಿಳಿಸಿರುತ್ತದೆ:<br><br>"ಮೆ: ಅಲ್ಟ್ರಾಟೆಕ್ ಸಿಮೆಂಟ್ ಲಿಮಿಟೆಡ್ ಕಂಪನಿಯು ತನ್ನ ನಾಲ್ಕನೆಯ ಸಿಮೆಂಟ್ ಉತ್ಪಾದನಾ ಘಟಕಕ್ಕೆ ಹಂಗನಹಳ್ಳಿ, ಊಡಗಿ, ಹುಡಾ (ಬಿ) ಮತ್ತು ನೃಪತುಂಗ ನಗರ ಗ್ರಾಮಗಳ ರೈತರಿಂದ ಕೃಷಿ ಜಮೀನು ಖರೀದಿಸಲು ಕಂಪನಿ ಮತ್ತು ರೈತರ ಮಧ್ಯೆ ನೇರ ಒಪ್ಪಂದ ಮಾಡಿಕೊಂಡಿರುತ್ತಾರೆ. ಅದರ ಪ್ರಕಾರ ರೈತರಿಗೆ ಹಣ ನೀಡಿ ಜಮೀನುಗಳನ್ನು ಖರೀದಿಸಲಾಗಿರುತ್ತದೆ". |

| | | |
|---|---|---|
| ಆ | ಮೆ: ಅಲ್ಟ್ರಾಟೆಕ್ ಸಿಮೆಂಟ್ ಕಂಪನಿಯ ನಾಲ್ಕನೇ ಘಟಕಕ್ಕಾಗಿ ರೈತರ ಜಮೀನು ಖರೀದಿಸಿ ಅಧಿಸೂಚನೆ ಹೊರಡಿಸುವಾಗ ಭೂ ಅಧಿನಿಯಮ 1961 ಕಲಂ 109(1) ರ ಸ್ಪಷ್ಟ ಉಲ್ಲಂಘನೆ ಮಾಡಿ ರೈತರಿಗೆ ಮೋಸ ಮಾಡಿರುವುದು ಗಮನಿಸಲಾಗಿದೆಯೇ; | ಈ ಬಗ್ಗೆ ಕಂದಾಯ ಇಲಾಖೆಯಿಂದ ಮಾಹಿತಿ ಪಡೆದಿದ್ದು "ಕಂಪನಿ ಮತ್ತು ರೈತರ ಮಧ್ಯೆ ನೇರ ಒಪ್ಪಂದದ ಮೂಲಕ ಖರೀದಿಸಿರುವುದರಿಂದ ಕರ್ನಾಟಕ ಭೂ ಸುಧಾರಣೆ ಅಧಿನಿಯಮ 1961ರ ಕಲಂ 109(1) ರಡಿ ಉಲ್ಲಂಘನೆ ಆಗಿರುವುದಿಲ್ಲ" ವೆಂದು ಹಾಗೂ "ಕಂಪನಿ ಮತ್ತು ರೈತರ ಮಧ್ಯೆ ನೇರ ಒಪ್ಪಂದ ಆಗಿರುವ ಕಾರಣ ಪರಿಹಾರ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ" ಎಂದು ಕಂದಾಯ ಇಲಾಖೆ ತಿಳಿಸಿರುತ್ತದೆ. |
| ಇ | ಜಮೀನು ಕಳೆದುಕೊಂಡ ರೈತರು 1712 ದಿನಗಳ ಧರಣಿ ಸತ್ಯಾಗ್ರಹ ನಡೆಸಿ 22 ಜನ ರೈತರು ಪ್ರಾಣ ಕಳೆದುಕೊಂಡರು. ಅವರಿಗೆ ಹೆಚ್ಚುವರಿ ಪರಿಹಾರ ರೂ.4.50 ಲಕ್ಷ ನೀಡದಿರಲು ಕಾರಣಗಳೇನು; | |
| ಈ | ಡಾ: ಸರೋಜಿನಿ ಮಹಿಷಿ ವರದಿಯ ಆದೇಶದಂತೆ ಧರಣಿ ನಿರತ ರೈತರು ಪ್ರಾಣ ಕಳೆದುಕೊಂಡಿದ್ದರಿಂದ ಪ್ರತಿ ಕುಟುಂಬಕ್ಕೆ ರೂ.10 ಲಕ್ಷ ಪರಿಹಾರವನ್ನು ಹಾಗೂ ಜಮೀನು ಕಳೆದುಕೊಂಡ ರೈತರ ಕುಟುಂಬದ ಸದಸ್ಯರಿಗೆ ಕಂಪನಿಯಲ್ಲಿ ಖಾಯಂ ಹುದ್ದೆ ನೀಡಲು ಸರ್ಕಾರ ಚಿಂತಿಸುವುದೇ; | ಮಾರ್ಚ್-2025 ಅಂತ್ಯಕ್ಕೆ ಈ ಘಟಕವು ಒಟ್ಟು 1,661 ಜನರಿಗೆ ಉದ್ಯೋಗ ನೀಡಿದ್ದು, ಈ ಪೈಕಿ 1,345 ಸ್ಥಳೀಯರಿಗೆ ಉದ್ಯೋಗ ನೀಡಿರುತ್ತದೆ<br><br>ಒಟ್ಟಾರೆ ಈ ಘಟಕದಲ್ಲಿ 80.98% ಸ್ಥಳೀಯರು ಕಾರ್ಯನಿರ್ವಹಿಸುತ್ತಿರುತ್ತಾರೆ. |
| ಉ | ರೈತರ ಜಮೀನಿಗೆ ಸೂಕ್ತ ಪರಿಹಾರ ನೀಡದೆ ಮೋಸ ಮಾಡುತ್ತಿರುವ ಕಂಪನಿಗಳ ವಿರುದ್ಧ ನ್ಯಾಯಾಂಗ ತನಿಖೆ ಕೈಗೊಂಡು ರೈತರಿಗೆ ಸಹಾಯ ಮಾಡಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ? | ಮೇಲಿನ (ಇ) ರಲ್ಲಿ ಉತ್ತರಿಸಲಾಗಿದೆ. |

ಕಡತ ಸಂಖ್ಯೆ. ಸಿಐ 235 ಎಸ್‌ಪಿಐ 2025

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು